ದೂರವಾಣಿ :22276601

ಕರ್ನಾಟಕ ಸರ್ಕಾರ
[ಲೋಕೋಪಯೋಗಿ ಇಲಾಖೆ]

E.Mail: cenhpwd@yahoo.co.in

ಸಂ:ಮುರಾಹೆ:ತಾಂ.ಸ-3:ಸ.ಇಂ-5:ಜಾಬ್ ಸಂಖ್ಯೆ:141:2024-25 3005

ಮುಖ್ಯ ಇಂಜಿನಿಯರ್‌ರವರ ಕಛೇರಿ,
ರಾಷ್ಟ್ರೀಯ ಹೆದ್ದಾರಿಗಳು, ಕೆ.ಆರ್.ವೃತ್ತ,
ಬೆಂಗಳೂರು, ದಿನಾಂಕ:
18 JAN 2025

| ಕಾರ್ಯಪಾಲಕ ಇಂಜಿನಿಯರ್ ಕಛೇರಿ ರಾಷ್ಟ್ರೀಯ ಹೆದ್ದಾರಿ ವಿಭಾಗ, ತುಮಕೂರು. | |
|---|---|
| ಕಾ.ನಿ. ಇಂಜಿನಿಯರ್ | |
| ಲೆಕ್ಕಪತ್ರ ಅಧೀಕ್ಷಕರು | |
| ತಾಂತ್ರಿಕ ಶಾಖೆ | |
| ಆಡಳಿತ ಶಾಖೆ | |

20/1/2025

ಇವರಿಗೆ,

ಕಾರ್ಯಪಾಲಕ ಅಭಿಯಂತರರು,
ರಾಷ್ಟ್ರೀಯ ಹೆದ್ದಾರಿ ವಿಭಾಗ,
ತುಮಕೂರು

ಮಾನ್ಯರೇ,

**ವಿಷಯ:** ಕೇಂದ್ರ ರಸ್ತೆ ಮತ್ತು ಮೂಲಸೌಕರ್ಯ ನಿಧಿ ಯೋಜನೆಯಡಿಯಲ್ಲಿ 2023-24ನೇ ಸಾಲಿಗೆ ಅನುಮೋದನೆಯಾದ "Improvement to Road SH-47 to NH-206 via Mathighatta, Suguru, Bochihalli, Kaidala, Karadalusanthe, Kuppalu, Kuppuru Road from Ch:17.90 to 20.90 Km. in Tiptur Taluk (Job No:CRIF-KNT-2023-24-141) ಕಾಮಗಾರಿಯ ಆರ್ಥಿಕ ಬಿಡ್‌ಗೆ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: PWD 423 FC-1 2018 Bangalore Dated:24.09.2018
2. ಈ ಕಛೇರಿಯ ತಾಂತ್ರಿಕ ಮಂಜೂರಾತಿ ಆದೇಶ ಸಂಖ್ಯೆ: 1268 ದಿನಾಂಕ:05.09.2024.
3. ಅಧೀಕ್ಷಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ ವೃತ್ತ, ಬೆಂಗಳೂರು ರವರ ಪತ್ರ ಸಂಖ್ಯೆ: 141/2024-25/2630-31 ದಿನಾಂಕ: 13.01.2025.

ಸಂ:1281 ದಿನಾಂಕ:20/1/25

*****

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿತ ಕಾಮಗಾರಿಯ ಆರ್ಥಿಕ ಬಿಡ್‌ಗೆ ಅನುಮೋದನೆ ಸಂಬಂಧ ಉಲ್ಲೇಖ (3)ರ ಅಧೀಕ್ಷಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ ವೃತ್ತ, ಬೆಂಗಳೂರು ರವರ ಪತ್ರದೊಂದಿಗೆ ಸಲ್ಲಿಸಿರುವ ದಾಖಲೆ/ ವಿವರಗಳನ್ನು ಹಾಗೂ ಅವರ ಶಿಫಾರಸ್ಸನ್ನು ಪರಿಗಣಿಸಿ ರಾಷ್ಟ್ರೀಯ ಹೆದ್ದಾರಿ, ಬೆಂಗಳೂರು ವಲಯದ 2022-23ನೇ ಸಾಲಿನ 2024-25ನೇ ಸಾಲಿಗೆ ಮುಂದುವರಿದ ಚಾಲ್ತಿ ದರಸೂಚಿಯನ್ವಯ ಟೆಂಡರ್‌ಗಿಟ್ಟ ಮೊತ್ತ ರೂ.96,61,057.02 (ತೊಂಭತ್ತಾರು ಲಕ್ಷದ ಅರವತ್ತೊಂದು ಸಾವಿರದ ಐವತ್ತೇಳು ರೂಪಾಯಿಗಳು ಹಾಗೂ ಪೈಸೆ ಎರಡು) ರೂ._ಗಳಿಗೆ ಹೋಲಿಸಿದಂತೆ ಟೆಂಡರ್‌ನಲ್ಲಿ ಪಾಲ್ಗೊಂಡು ಶೇ. (-) 7.18 (ಶೇಕಡ ಏಳು ಬಿಂದು ಒಂದು ಎಂಟು ಮಾತ್ರ) ರಷ್ಟು ಕಡಿಮೆ ಇರುವ ದರಗಳನ್ನು ಸಲ್ಲಿಸಿರುವ L-1 ಗುತ್ತಿಗೆದಾರರಾದ ಮೆ: ಶ್ರೀಕಂಠೇಶ್ವರ (Sree kanteshwara), Construction Pvt. Ltd. ಒಂದನೇ ದರ್ಜೆ ಗುತ್ತಿಗೆದಾರರು, ತುಮಕೂರು ರವರ ನಮೂದಿತ ಟೆಂಡರ್ ಮೊತ್ತ ರೂ.89,67,247.00 (ಎಂಭತ್ತೊಂಭತ್ತು ಲಕ್ಷದ ಅರವತ್ತೇಳು ಸಾವಿರದ ಎರಡು ನೂರ ನಲವತ್ತೇಳು ರೂಪಾಯಿಗಳು) ಗಳಿಗೆ (ಜಿ.ಎಸ್.ಟಿ ಹೊರತುಪಡಿಸಿ) ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ ಪ್ರದತ್ತವಾದ ಅಧಿಕಾರದನ್ವಯ ಹಾಗೂ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟಂತೆ ಸದರಿಯವರ ಆರ್ಥಿಕ ಬಿಡ್ ಅನ್ನು ಅನುಮೋದಿಸಿದೆ.

1. ಅನುಮೋದಿತ ಟೆಂಡರ್ ಮೊತ್ತ ರೂ.89,67,247.00 (ಎಂಭತ್ತೊಂಭತ್ತು ಲಕ್ಷದ ಅರವತ್ತೇಳು ಸಾವಿರದ ಎರಡು ನೂರ ನಲವತ್ತೇಳು ರೂಪಾಯಿಗಳು)ಗಳನ್ನು ಮೀರದಂತೆ, ಬಿ.ಓ.ಕ್ಯೂ. ರೀತ್ಯಾ ಕಾರ್ಯಾದೇಶ ನೀಡತಕ್ಕದ್ದು ಮತ್ತು ಪ್ರತಿಯನ್ನು ಈ ಕಛೇರಿಗೆ ತಪ್ಪದೇ ಸಲ್ಲಿಸತಕ್ಕದ್ದು.

2. ಕಡಿಮೆ ನಮೂದಿಸಿರುವ ಟೆಂಡರ್ ಮೊತ್ತಕ್ಕೆ (Unbalanced amount) ಬ್ಯಾಂಕ್ ಗ್ಯಾರಂಟಿ (Bank Guarantee) ಯನ್ನು ಟೆಂಡರ್ ನಿಯಮಾನುಸಾರ ಪಡೆದು ಟೆಂಡರ್ ಕರಾರು ಮಾಡಿಕೊಳ್ಳುವುದು.

3. ಟೆಂಡರ್‌ನಲ್ಲಿನ ಅಂಶ, ಪರಿಮಾಣ, ದರ, ಟೆಂಡರ್ ಶೇಕಡ, ಟೆಂಡರ್ ಮೊತ್ತ ಮತ್ತೊಮ್ಮೆ ದೃಢೀಕರಿಸಿಕೊಳ್ಳುವುದು.

4. ಕೆಲಸ ವಹಿಸಿಕೊಡುವ ಮುನ್ನ ಸದರಿ ಗುತ್ತಿಗೆದಾರರ ಬಳಿ ಇರುವ ಸಾಮಗ್ರಿ, ಯಂತ್ರೋಪಕರಣ, ತಾಂತ್ರಿಕ ಸಿಬ್ಬಂದಿ, ಇತ್ಯಾದಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ದೃಢೀಕರಿಸಿಕೊಳ್ಳತಕ್ಕದ್ದು.

5. ಟೆಂಡರ್ ಕರಾರು ಮಾಡಿಕೊಳ್ಳುವ ಮುನ್ನ ಸದರಿ ಕಾಮಗಾರಿಯ ಅಂದಾಜು ಮೊತ್ತಕ್ಕೆ ಅನ್ವಯಿಸುವ Standard Tender Document ರೀತ್ಯಾ ಕಡ್ಡಾಯವಾಗಿ ಎಲ್ಲಾ ವಿಧಿ ನಿಯಮ ಪಾಲಿಸತಕ್ಕದ್ದು.

6. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿಯನ್ನು ಈಗಾಗಲೇ ಟೆಂಡರ್‌ನ ಅಧಿಸೂಚನೆಯಲ್ಲಿ ನಿಗಧಿಸಿದ ಅವಧಿ ಮೀರದಂತೆ ನೋಡಿಕೊಳ್ಳತಕ್ಕದ್ದು.

7. ಸದರಿ ಕಾಮಗಾರಿ ಪೂರ್ಣಗೊಳಿಸಲು ಅವಶ್ಯಕ ಎಲ್ಲಾ ಅಂಶಗಳನ್ನು ಪರಿಗಣಿಸಿ ಈಗಾಗಲೇ ನಿಗಧಿಪಡಿಸಿದ ಅವಧಿಗೆ ಸೀಮಿತಗೊಳಿಸಿ PERT Chart, Bar Chart ತಯಾರಿಸಿ ತೃಪ್ತಿಕರವಾಗಿ ವಿಶಿಷ್ಟ ವಿವರಣೆಯಂತೆ ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.

8. ಕಾಮಗಾರಿಗೆ ಉಪಯೋಗಿಸುವ ಸಾಮಗ್ರಿ ಮತ್ತು ಪೂರ್ಣಗೊಂಡ ಅಂಶಗಳ ಗುಣಮಟ್ಟದ ಬಗ್ಗೆ ಸಕ್ಷಮ ಗುಣನಿಯಂತ್ರಣ ಅಧಿಕಾರಿಗಳಿಂದ ದೃಢೀಕರಣ ಪಡೆಯತಕ್ಕದ್ದು.

9. ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ, ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ, ನವದೆಹಲಿ ರವರ ಪತ್ರ ಸಂಖ್ಯೆ: RW/BNG/GENN/CRF/121/2020 ದಿನಾಂಕ:13.03.2024 ರ ಆದೇಶದಲ್ಲಿ ಉಲ್ಲೇಖಿಸಿರುವ ಷರತ್ತುಗಳನ್ವಯ ಕಾರ್ಯಪಾಲಕ ಅಭಿಯಂತರರವರು ಕಡ್ಡಾಯವಾಗಿ ಕ್ರಮ ವಹಿಸತಕ್ಕದ್ದು.

10. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಲೋಇ 06 ಸಿ ಆರ್ ಎಫ್. 2024 (ಇ) ಬೆಂಗಳೂರು ದಿನಾಂಕ:29.08.2024 ರಲ್ಲಿ ಉಲ್ಲೇಖಿಸಿರುವ ಷರತ್ತುಗಳನ್ವಯ ಕಾರ್ಯಪಾಲಕ ಅಭಿಯಂತರರವರು ಕಡ್ಡಾಯವಾಗಿ ಕ್ರಮ ವಹಿಸತಕ್ಕದ್ದು.

11. ಸರ್ಕಾರದ ಸುತ್ತೋಲೆ ಸಂಖ್ಯೆ LAW-LAC/198/2024 ದಿನಾಂಕ: 16.11.2024ರಂತೆ ಗುತ್ತಿಗೆ ಕರಾರಿನಲ್ಲಿ ಅರ್ಬಿಟ್ರೇಷನ್ ಕ್ಲಾಸ್‌ಗೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರವರು ಕಡ್ಡಾಯವಾಗಿ ಕ್ರಮವಹಿಸತಕ್ಕದ್ದು.

ತಮ್ಮ ವಿಶ್ವಾಸಿ,

ಕರಡು ಮುಖ್ಯ ಇಂಜಿನಿಯರ್ ರವರಿಂದ
ಅನುಮೋದಿಸಲ್ಪಟ್ಟಿದೆ

17/01/25

ಮುಖ್ಯ ಇಂಜಿನಿಯರ್ ಪರವಾಗಿ,
ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರು.

Signature Not Verified
Digitally signed by SHIVAKUMAR
Date: 2025.01.22 16:52:37 IST
Location: eProcure-EPROC